
ಆದರೂ ಅವನು ಹಿಂದೆ ಸರಿಯಲಿಲ್ಲ. ಡಾಕ್ಟರ್ ಅವಳಿಗೆ ಪತ್ರ ಬರೆದು ಟಪಾಲಿಗೆ ಹಾಕಿದ. ಅದಕ್ಕೆ ಉತ್ತರವಾಗಿ ಒಬ್ಬ ಗಂಡಸಿನ ಹಸ್ತಾಕ್ಷರದ ನಾಲ್ಕು ವಾಕ್ಯಗಳಿದ್ದವು.

'ಇನ್ನು ನೀನು ನನ್ನ ಮಗಳಿಗೆ ಪತ್ರ ಬರೆದರೆ ನಾನು ನಿನ್ನನ್ನು ನಾಶಪಡಿಸುತ್ತೇನೆ' ಅಷ್ಟೆ. ಅವನು ಅದನ್ನು ಹರಿದು ಹಾಕಿದ. ನಾಶಪಡಿಸುತ್ತಾನಂತೆ! ಹೇಗೆ ನಾಶಪಡಿಸುತ್ತಾನೆ? ಸಾಯಿಸಲು ಈ ಕಾಲದಲ್ಲಿ ಸಾಧ್ಯವೇನು? ಡಾಕ್ಟರ್ ಊರುಬಿಡುವ ಮೊದಲು ಮಂತ್ರವಾದಿಯ ಮನೆಗೆ ಹೋದ. ಹೊತ್ತು ರಾತ್ರಿ ಎಂಟೂವರೆ. ಮಂತ್ರವಾದಿ ಬಹುಶಃ ನಡೆದಾಡಲು ಹೋಗಿ ಹಿಂತಿರುಗಿ ಬಂದಿರಲಾರನೆಂಬ ವಿಚಾರ ಅವನಿಗೆ ಮತ್ತಷ್ಟು ಧೈರ್ಯ ನೀಡಿತ್ತು. ಬಾಗಿಲು ತೆರೆದಿದ್ದು ಅವಳೇ. ಆತ ಕೇಳಿದ,

'ನನ್ನ ಜೊತೆ ಬರುವೆಯಾ? ನಾನು ನಿನ್ನನ್ನು ಬಿಟ್ಟು ಬದುಕಲಾರೆ.'

ಅವಳು ಅವನ ಕೈಯನ್ನು ತನ್ನ ಕೈಗಳಲ್ಲಿಟ್ಟು ಅದುಮಿದಳು. ಅವಳ ಕಣ್ಣುಗಳು ತುಂಬಿ ಹರಿದವು, ಅವಳು ಏನೂ ಮಾತನಾಡಲಿಲ್ಲ. ಅಷ್ಟರಲ್ಲಿ ಗೇಟು ತೆರೆಯುವ ಸದ್ದನ್ನು ಅವರು ಕೇಳಿದರು. ಅವನು ಬಾಗಿಲ ಮರೆಯಲ್ಲಿ ಅವಿತ. ಮಂತ್ರವಾದಿ ಮರಳಿ ಬಂದಿದ್ದ; ಏಣಿಮೆಟ್ಟಿಲುಗಳನ್ನು ಹತ್ತಿ ಮಹಡಿಗೆ ಹೋದ. ಹಿಂದಿನಿಂದ ಮಗಳು. ಡಾಕ್ಟರ್ ತಕ್ಷಣ ಮನೆಗೆ ಹಿಂತಿರುಗಿದ.



ಅವಳು ತನ್ನನ್ನು ಪ್ರೀತಿಸುತ್ತಿದ್ದಾಳೆಂದೂ, ಅವಳ ಜೀವನದಲ್ಲಿ ಸಂತೋಷವೆಂಬುದು ಮರೀಚಿಕೆಯೆಂದೂ ಅವನಿಗೆ ಮನದಟ್ಟಾಯಿತು.

ಎರಡು ವರ್ಷಗಳು ಮತ್ತೆ ಸರಿದವು. ಡಾಕ್ಟರರ ತಂದೆ ತೀರಿಕೊಂಡರು. ಅವನು ಮನೆಗೆ ಹಿಂತಿರುಗಿ ಅಮ್ಮನ ಬಳಿ ಸ್ವಲ್ಪ ದಿವಸ ಇರತೊಡಗಿದ ಒಂದು ದಿನ ಅಮ್ಮ ಹೇಳಿದಳು:

'ಮಂತ್ರವಾದಿ ಕಾಯಿಲೆ ಮಲಗಿದ್ದಾನಂತೆ. ಹೊರಕ್ಕೆ ಬಂದೇ ನಾಲ್ಕೈದು ತಿಂಗಳಾದವು.'

ಅವನು ಅಂದು ಮಂತ್ರವಾದಿಯ ಮನೆಗೆ ಹೋದ; ಅಲ್ಲಿದ್ದ ಕೆಲಸಗಾರನ ಅನುಮತಿಯನ್ನು ನಿರೀಕ್ಷಿಸದೆ ಮಹಡಿಗೆ ಹೋದ. ಮಂತ್ರವಾದಿ ಮಲಗಿದ್ದ ಕೋಣೆಯನ್ನು ಪ್ರವೇಶಿಸಿದ.

'ಯಾರದು?' ಮಂಚದ ಮೇಲೆ ಹೊದ್ದುಕೊಂಡು ಮಲಗಿದ್ದ ಮಂತ್ರವಾದಿ ಕೇಳಿದ.

'ನನ್ನ ಪರಿಚಯವಿಲ್ಲವೆ? ನಾನು ಚಂದ್ರ.'

'ನಿಮಗೆ ಇಲ್ಲೇನು ಕೆಲಸ?'

'ನಾನು ಪುನಃ ನಿಮ್ಮ ಅನುಮತಿ ಕೇಳಲು ಬಂದಿದ್ದೇನೆ. ನಾನು ನಿಮ್ಮ ಮಗಳನ್ನು ಮದುವೆಯಾಗಲು ಇಚ್ಛಿಸುತ್ತೇನೆ.'

'ಹಹ್ಹ! ನನ್ನ ಮಗಳನ್ನ ನೀನು ಮದುವೆ ಆಗ್ತಾ ಇದ್ದೀಯೇನು? ಅವಳು ಅದಕ್ಕೆ ಖಂಡಿತವಾಗಿಯೂ ಒಪ್ಪಲಾರಳು' ಮಂತ್ರವಾದಿ ಹೇಳಿದ, 'ಅವಳು ಪರಿಪೂರ್ಣಳು. ಅವಳಿಗೆ ಯಾವುದೇ ರೀತಿಯ ಕೊರತೆಯೂ ಇಲ್ಲ, ನಿನಗೆ?'